22ND MARCH 2007

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1257(1406)

ಮಾನ್ಯ ಸದಸ್ಯರ ಹೆಸರು ಶ್ರೀ ಧ್ರುವನಾರಾಯಣ ಆರ್
(ಸಂತೇಮರಳ್ಳಿ)

ಉತ್ತರಿಸಬೇಕಾದ ಸಚಿವರು ಶ್ರೀ ಗೋವಿಂದ ಎಂ ಕಾರಜೋಳ
(ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಸಚಿವರು)

ಅ) ರಾಜ್ಯದಲ್ಲಿ ಪಡಿತರ ಚೀಟಿ ವಿತರಣೆ ವ್ಯವಸ್ಥೆ ಪರಿಪೂರ್ಣವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಈಗ ನೀಡಿರುವ ಪಡಿತರ ಚೀಟಿ ಅರ್ಹ ಫಲಾನುಭವಿಗಳಿಗೆ ದೊರೆಯದೇ ಇರುವುದು ಸರ್ಕಾರಕ್ಕೆ ತಿಳಿದಿದೆಯೇ,

ಹೌದು

ಇ) ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು,

ಮನೆ ಮನೆ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳಿಗೆ ಅರ್ಹತೆಗೆ ಅನುಗುಣವಾಗಿ ಅನ್ನಪೂರ್ಣ, ಅಂತ್ಯೋದಯ, ಬಿಪಿಎಲ್ (ಅಕ್ಷಯ) ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿರುತ್ತದೆ ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿ ಹಲವು ರೀತಿಯ ಲೋಪದೋಷಗಳು ಅಂದರೆ ನ್ಯಾಯಬೆಲೆ ಅಂಗಡಿ ಬದಲಾವಣೆ, ಪಡಿತರ ಚೀಟಿಯಲ್ಲಿ ಹೊಸ ಕುಟುಂಬ ಸದಸ್ಯರ ಸೇರ್ಪಡೆ, ಪಡಿತರ ಚೀಟಿಯಲ್ಲಿ ಕುಟುಂಬ ಸದಸ್ಯರ ತೆಗೆದುಹಾಕುವ ಬಗ್ಗೆ, ಕುಟುಂಬದ ಮುಖ್ಯಸ್ಥರ ಬದಲಾವಣೆ, ಇತರೇ ಯಾವುದೇ ರೀತಿಯ ಅಹವಾಲುಗಳು, ತಿದ್ದುಪಡಿಗಳು, ವರ್ಗ ಬದಲಾವಣೆ ಕೋರಿರುವ ಅಹವಾಲುಗಳು, ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳ ಬಗ್ಗೆ ವರದಿಯಾಗಿದ್ದು, ಈ ರೀತಿಯಲ್ಲಿ ಸಾರ್ವಜನಿಕರಿಂದ 64 70 ಲಕ್ಷ ಅಹವಾಲುಗಳನ್ನು ಸ್ವೀಕರಿಸಲಾಗಿದ್ದು, ಇದರಲ್ಲಿ 15 70 ಲಕ್ಷ ವರ್ಗ ಬದಲಾವಣೆಗಾಗಿ 41 36 ಲಕ್ಷ ಹೊಸ ಪಡಿತರ ಚೀಟಿಗಾಗಿ 7 64 ಲಕ್ಷ ಇತರೆ ಅಹವಾಲುಗಳಿದ್ದು, ಅವುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ ಹಾಗೂ ವರ್ಗ ಬದಲಾವಣೆಗೆ ಅರ್ಹರಿರುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಆದೇಶಿಸಿದೆ ಹೊಸದಾಗಿ ಪಡಿತರ ಚೀಟಿ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಿದೆ

ಈ) ರಾಜ್ಯದಲ್ಲಿ ಶಾಶ್ವತ ಪಡಿತರ ಚೀಟಿ ನೀಡಲು ಸರ್ಕಾರ ನಿಗಧಿಪಡಿಸಿರುವ ಸಮಯವೆಷ್ಟು?

ನಿಗದಿಪಡಿಸಿರುವುದಿಲ್ಲ ಆದರೆ, ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಪೂರೈಸಲು ಕನಿಷ್ಟ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1258(1412)**

ಸದಸ್ಯರ ಹೆಸರು **ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ)**

ಉತ್ತರಿಸಬೇಕಾದ ಸಚಿವರು **ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)**

ಅ) ರಾಜ್ಯದಲ್ಲಿ ರೈತರ ಸಾಲ ಮನ್ನಾ ಮಾಡಲು ಸರ್ಕಾರ ನಿರ್ಧರಿಸಿರುವುದು ನಿಜವೇ? ಹಾಗಿದ್ದಲ್ಲಿ ಮನ್ನಾ ಮಾಡಲು ಉದ್ದೇಶಿಸಿರುವ ಒಟ್ಟು ಸಾಲದ ಮೊತ್ತ ಎಷ್ಟು?

ಆ) ರೈತರ ಯಾವ ಯಾವ ಸಾಲ ಮನ್ನಾ ಮಾಡಲಾಗುವುದು? ಸರ್ಕಾರ ಇದಕ್ಕೆ ಮಾರ್ಗಸೂಚಿಯನ್ನೇನಾದರೂ ನಿಗದಿಪಡಿಸಿದೆಯೇ?

2007–08ನೇ ಸಾಲಿನ ಆಯವ್ಯಯ ಭಾಷಣದಲ್ಲಿ ತಿಳಿಸಿರುವಂತೆ ದಿನಾಂಕ 01 04 2006ರಿಂದ ಈಚೆಗೆ ರೈತರು ಪಡೆದಿರುವ 25,000 ರೂಪಾಯಿಗಳವರೆಗಿನ ಹಾಗೂ 31 12 2006 ರವರೆಗೆ ಬಾಕಿ ಉಳಿದಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲವನ್ನು ಸರ್ಕಾರವು ಮನ್ನಾ ಮಾಡಲಿದೆ ಈ ಸಂಬಂಧದಲ್ಲಿ ವಿವರವಾದ ಸರ್ಕಾರಿ ಆದೇಶವನ್ನು ಸದ್ಯದಲ್ಲೇ ಹೊರಡಿಸಲಾಗುವುದು

ಇ) ಸಾಲ ಮನ್ನಾ ಮಾಡಲು ಸಂಪನ್ಮೂಲವನ್ನು ಯಾವ ಮೂಲದಿಂದ ಕ್ರೋಢೀಕರಿಸುವುದು?

ಮೇಲೆ ತಿಳಿಸಿದಂತೆ ಮನ್ನಾ ಮಾಡಲಾದ ಮೊಬಲಗನ್ನು ಸರ್ಕಾರವು ಆಯವ್ಯಯದಲ್ಲಿ ಅನುದಾನ ಒದಗಿಸುವ ಮೂಲಕ ಸಂಬಂಧಪಟ್ಟ ಸಹಕಾರ ಸಂಸ್ಥೆಗಳಿಗೆ ಭರಿಸಿಕೊಡುತ್ತದೆ